**ಇಂದು ದಿ: 30.07.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆ:ವಾದಿ ಪರವಾಗಿ: ಶ್ರೀ ಆರ್.ಎಸ್.ಎಂ.,ವಕೀಲರಿಂದ**

1. ಚಿತ್ರದುರ್ಗ ಜಿಲ್ಲಾನೊಂದಾಣಾಧಿಕಾರಿಗಳ ಆದೇಶದ ಆದೇಶವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-01 ಎಂದು ಗುರುತಿಸಲಾಯಿತು. ಚಿತ್ರದುರ್ಗ ಜಿಲ್ಲಾನೊಂದಾಣಾಧಿಕಾರಿಗಳು ಕೊಟ್ಟ ನೋಟಿಸ್‌ವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-02 ಎಂದು ಗುರುತಿಸಲಾಯಿತು. ಕಾನೂನು ರಿತ್ಯಾ ನೋಟಿಸ್‌ನ್ನು ಹಾಜರುಪಡಿಸಿದ್ದು ಅದನ್ನು ನಿಪಿ-03 ಎಂದು ಗುರುತಿಸಲಾಯಿತು. ಅಂಚೆ ರಶೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-04 ಎಂದು ಗುರುತಿಸಲಾಯಿತು. ಅಂಚೆ ಸ್ವೀಕೃತಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-05 ಎಂದು ಗುರುತಿಸಲಾಯಿತು. ನೋಟಿಸ್‌ಗೆ ಕೊಟ್ಟ ಉತ್ತರ ಹಾಜರುಪಡಿಸಿದ್ದು ಅದನ್ನು ನಿಪಿ-06 ಎಂದು ಗುರುತಿಸಲಾಯಿತು.

ದಿ: 08.02.2021 ರ ಕ್ರಯದ ಕರಾರುಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-07 ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-07 ರಲ್ಲಿ ಪ್ರತಿವಾದಿಯ ಸಹಿ ಇರುತ್ತದೆ ಎಂದು ನೋಡಿ ಗುರುಸಿದ್ದು ಸದರಿ ಸಹಿಯನ್ನು ನಿಪಿ-07(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ-07 ಕ್ಕೆ ಸಾಕ್ಷಿದಾರರಾಗಿ ತಿಮ್ಮಪ್ಪ ತಂದೆ ಗೊವಿಂದಪ್ಪ, ಟಿ.ಶಿವಣ್ಣ ಮತ್ತು ಗಂಗಾಧರಪ್ಪ ಇವರು ಸಹಿ ಮಾಡಿರುತ್ತಾರೆ ಎಂದು ಸದರಿ ಸಹಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-07(ಬಿ) ಯಿಂದ ನಿಪಿ-07(ಡಿ) ಎಂದು ಗುರುತಿಸಲಾಯಿತು. ನಿಪಿ-07 ನ್ನು ಟಿ.ಕೆ.ಗಂಗಾಧರ ಎನ್ನುವ ಪತ್ರ ಬರಹಗಾರರು ಬರೆದಿರುತ್ತಾನೆ ಎಂದು ಸಾಕ್ಷಿ ಸದರಿಯವರ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-07(ಇ) ಎಂದು ಗುರುತಿಸಲಾಯಿತು.

ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-08 ಎಂದು ಗುರುತಿಸಲಾಯಿತು.

**ಆದ್ದರಿಂದ ದಾವೆಯಲ್ಲಿ ಕೋರಿದಂತೆ ನಮ್ಮ ಪರ ಡಿಕ್ರಿ ಮಾಡಬೇಕೆಂದು ಪ್ರಾರ್ಥನೆ.**

ಪಾಟೀಸವಾಲು: ಪ್ರತಿವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.